# ಭಾಷೆ ಮತ್ತು ಉಪಭಾಷೆ

Language and Dialect

– ರಮಾಕಾಂತ ಅಗ್ನಿಹೋತ್ರಿ

******

ತಾವು ಮಾತನಾಡುವ ಭಾಷೆಯ(ಗಳ) ಬಗ್ಗೆ ಜನರಿಗೆ ಸಾಕಷ್ಟು ಜ್ಞಾನವಿರುತ್ತದೆ. ಶಬ್ದಗಳನ್ನು ಪೋಣಿಸಿ ಪದಗಳನ್ನು, ಹೆಣೆದು ಸದಾ ವ್ಯಾಕರಣಬದ್ಧ ಮತ್ತು ಸ್ವೀಕಾರಾರ್ಹ ವಾಕ್ಯಗಳನ್ನು ರಚಿಸಲೂ ಅವರು ತಿಳಿದಿರುತ್ತಾರೆ. ಅನೇಕ ಸಲ, ಸೂಕ್ಷ್ಮವಾಗಿಯೂ, ರೂಪಕಗಳಾಗಿಯೂ ಭಾಷೆಯನ್ನು ಬಳಸುತ್ತಾರೆ. ಈ ಜ್ಞಾನವು ಅತ್ಯಂತ ಅಮೂರ್ತ, ಶ್ರೀಮಂತ ಮತ್ತು ಸಂಕೀರ್ಣವಾದರೂ ಸಹ ಇದು ಪ್ರಜ್ಞಾಪೂರ್ವಕ ಜ್ಞಾನವಲ್ಲ. ನೀವು ಆರ್ಜಿಸಿಕೊಂಡ ಭಾಷೆ ಮತ್ತು ಉಪಭಾಷೆ ಎರಡರ ವಿಷಯದಲ್ಲೂ ಇದು ಸತ್ಯ. ಭಾಷೆಯನ್ನು ಆರ್ಜಿಸಿಕೊಳ್ಳಲು ಸಾಮಾಜೀಕರಣದ ಸಾಮಾನ್ಯ ಪ್ರಕ್ರಿಯೆಗಳೇ ಮೂಲವಾದರೂ ಪ್ರತಿ ಮಗುವು ಯಾವುದೇ ನಿರ್ದಿಷ್ಟ ಬೋಧನೆ ಇಲ್ಲದಿದ್ದರೂ ತನಗೆ ನಾಲ್ಕು ವರ್ಷವಾಗುವುದಕ್ಕೆ ಮೊದಲೇ ಇದನ್ನು ಸಲೀಸಾಗಿ ಆರ್ಜಿಸಿಕೊಳ್ಳುತ್ತದೆ. ಭಾಷೆಯಿಲ್ಲದೆ, ಭಾಷೆ ಅಥವಾ ಸಂಸ್ಕೃತಿಯ ಯಾವುದೇ ವ್ಯವಸ್ಥೆಯು ಅಸ್ತಿತ್ವದಲ್ಲಿರಲು ಸಾಧ್ಯವಿಲ್ಲವೆಂದು ಒಂದು ಹಂತದಲ್ಲಿ ಜನರು ಅರಿತಿದ್ದಾರಾದರೂ ಅದೇ ಜನರು ಭಾಷೆಯ ಸಮಸ್ಯೆಯನ್ನು ಅಲಕ್ಷ್ಯ ಮತ್ತು ಅಪಕ್ವತೆಯ ದೃಷ್ಟಿಯಿಂದ ನೋಡುತ್ತಾರೆ. 'ಶುದ್ಧ ಮತ್ತು ಪ್ರಮಾಣೀಕೃತ' ಭಾಷೆ ಮತ್ತು 'ಸ್ಥಳೀಯವಾಗಿ ಮಾತನಾಡುವ ಹಳ್ಳಿಗಾಡಿನ' ಉಪಭಾಷೆ (ಆಡುಭಾಷೆ)ಗಳ ನಡುವೆ ಮೂಲಭೂತ ವ್ಯತ್ಯಾಸವಿದೆ ಎನ್ನುವುದು ಅವರ ಅನಿಸಿಕೆ.

ಅನೇಕ ಜನರು ಭಾಷೆಯ ಬಗ್ಗೆ ತರ್ಕಹೀನ ಮತ್ತು ಆಧಾರರಹಿತ ನಂಬಿಕೆಗಳನ್ನು ಹೊಂದಿದ್ದು ಅದನ್ನೇ ಪ್ರಚಾರ ಮಾಡುತ್ತಾರೆ. ಮಾನವ ಸಮಾಜದಲ್ಲಿನ ಶಾಂತಿಗೆ ಅವರು ತೀವ್ರ ಅಪಾಯಕಾರಿ. ಈ ಆಧಾರರಹಿತ ನಂಬಿಕೆಗಳು ಮತ್ತು ಅವುಗಳ ನೆಲೆಯಲ್ಲಿ ಮೊಳೆತ ನೀತಿಗಳು ತಂದೊಡ್ಡಿರುವ ಸಂಕಷ್ಟಗಳನ್ನು ವಿಶೇಷವಾಗಿ ನಮ್ಮ ಶಿಕ್ಷಣ ವ್ಯವಸ್ಥೆ ಎದುರಿಸುತ್ತಿದೆ. ವಾಸ್ತವವಾಗಿ, ಬಹುಶಃ ಇದು ಅವರ ತಪ್ಪೂ ಅಲ್ಲ. ಭಾಷೆಯ ಬಗ್ಗೆ ವೈಜ್ಞಾನಿಕ ತಿಳುವಳಿಕೆಯನ್ನು ಸೃಷ್ಟಿಸುವ ಹೊಣೆ ನಮ್ಮ ಸಮಾಜದ್ದಾಗಲಿ ಅಥವಾ ಶಿಕ್ಷಣದ್ದಾಗಲಿ ಅಲ್ಲ.

## ವ್ಯಾಕರಣ ಜ್ಞಾನ:

ನಾವು ಮಾತನಾಡುವ ಭಾಷೆಯ ವ್ಯಾಕರಣವನ್ನು ಬಳಸುವಲ್ಲಿ ನಾವೆಲ್ಲರೂ ಸಾಕಷ್ಟು ಸಮರ್ಥರೆಂಬುದರಲ್ಲಿ ಯಾವುದೇ ಸಂದೇಹವಿಲ್ಲ. ಹಾಗಾಗಿ ತಪ್ಪು ಮಾಡುವುದು ಬಹಳ ವಿರಳ. ಒಂದು ವೇಳೆ ತಪ್ಪಾಗಿ ವಾಕ್ಯ ರಚನೆ ಮಾಡಿದರೂ ತಕ್ಷಣವೇ ಸರಿಪಡಿಸಿಕೊಂಡುಬಿಡುತ್ತೇವೆ. ಬೇರೆಯವರು ತಪ್ಪು ಮಾಡಿದರೂ ತಕ್ಷಣವೇ ಗಮನಿಸುತ್ತೇವೆ. ಹೊಸ ಹೊಸ ವಾಕ್ಯಗಳನ್ನು ನಿಯಮಿತವಾಗಿ ಸೃಷ್ಟಿಸುವುದರೊಂದಿಗೆ ಇತರರು ರಚಿಸಿದ ಹೊಸ ಪದಗಳನ್ನು ಮತ್ತು ವಾಕ್ಯಗಳನ್ನು ಸಹ ನಿರಾಯಾಸವಾಗಿ ಅರ್ಥಮಾಡಿಕೊಳ್ಳುತ್ತೇವೆ. ಆದಾಗ್ಯೂ, ಭಾಷೆಯ ಕುರಿತಾದ ಚರ್ಚೆಯನ್ನು ಭಾಷಾಶಾಸ್ತ್ರಜ್ಞರ ವಲಯಕ್ಕೆ ಮಾತ್ರ ಸೀಮಿತಗೊಳಿಸಲಾಗಿದೆ ಮತ್ತು ಅವರುಗಳು ಮಾಡುವ ಚರ್ಚೆ ಜನಸಾಮಾನ್ಯರಿಗೆ ಅರ್ಥವಾಗುವುದಿಲ್ಲ.

ಉದಾಹರಣೆಗೆ, ಪ್ರತಿಯೊಬ್ಬ ಹಿಂದಿ ಭಾಷಿಗನಿಗೂ **गीता खाना खाता है।** ಸರಿಯಾದ ವಾಕ್ಯವಲ್ಲ ಎಂದು ತಿಳಿದಿದೆ. ಕೆಲವರು ಕರ್ತೃಪದವಾದ ಗೀತಾ ಸ್ತ್ರೀಲಿಂಗವಾಗಿರುವುದರಿಂದ ಕ್ರಿಯಾಪದವು ಪುಲ್ಲಿಂಗವಾಗಿರಲು ಸಾಧ್ಯವಿಲ್ಲವೆಂದು ವಿವರಿಸಬಹುದು. ಆದರೆ, ಈ ನಿಯಮವು ಮುಂದಿನ ಎರಡು ವಾಕ್ಯಗಳಿಗೆ ಅನ್ವಯವಾಗುವುದಿಲ್ಲ:

**मोहन ने खाना खाया।**

**गीता ने खाना खाया।**

ಈ ಎರಡೂ ವಾಕ್ಯಗಳು ವ್ಯಾಕರಣಬದ್ಧವಾಗಿ ಸರಿಯಾಗಿವೆ. ಇಲ್ಲಿ ಮೋಹನ್ ಮತ್ತು ಗೀತಾ ವಿಭಿನ್ನ ಲಿಂಗದವರಾಗಿದ್ದರೂ ಕ್ರಿಯಾಪದ ಒಂದೇ ಆಗಿರುತ್ತದೆ. ಯಾರಾದರೂ **गीता ने खाना खाई।** ಎಂದರೆ ಅದು ತಪ್ಪು. ನಿಮಗೆ ಗೊಂದಲವೆನಿಸುತ್ತಿದ್ದರೆ ಈ ಕೆಳಗಿನ ಎರಡು ವಾಕ್ಯಗಳನ್ನು ನೋಡಿ:

**मोहन ने रोटी खाई।**

**गीता ने रोटी खाई।**

ಈಗ ಸ್ವಲ್ಪ ವಿಚಾರಶೀಲವಾಗಿ ಆಲೋಚಿಸಿ '**ने**' ಎಂಬ ಪದವು ಕರ್ತೃಪದದ ನಂತರ ಬಂದಾಗ ಕ್ರಿಯಾಪದವು ವಸ್ತುವಿಗೆ ಅನುರೂಪವಾಗುತ್ತದೆ, ಕರ್ತೃಪದಕ್ಕಲ್ಲ ಎಂದು ಹೇಳಬಹುದು. ಆದರೆ ಮುಂದಿನ ಎರಡು ವಾಕ್ಯಗಳ ವಿಷಯದಲ್ಲಿ ಇದು ಏನಾಗಬಹುದು?

**मोहन ने गीता को मारा।**

**गीता ने मोहन को मारा।**

ಈ ಎರಡೂ ವಾಕ್ಯಗಳು ಸರಿಯೇ ಆಗಿವೆ. ಕರ್ತೃಪದವು ಸ್ತ್ರೀಲಿಂಗವಾಗಿದ್ದರೂ **गीता ने मोहन को मारी**। ಎಂಬ ವಾಕ್ಯವು ತಪ್ಪೆಂದು ನಮಗೆ ತಿಳಿದಿದೆ.

ಒಂದು ವಾಕ್ಯದಲ್ಲಿನ ಎಲ್ಲಾ ನಾಮಪದಗಳನ್ನು ಉತ್ತರ-ಅವ್ಯಯಗಳು (ಪೋಸ್ಪೊಸಿಷನ್‌ಗಳು–ಇಂಗ್ಲಿಷಿನಲ್ಲಿ ನಾಮಪದದ ಹಿಂದೆ ಬರುವ ಉಪಸರ್ಗದಂತೆ ಹಿಂದಿಯಲ್ಲಿ ನಾಮಪದದ ಮುಂದೆ ಬರುವ ಪದ) ನಿರ್ಬಂಧಿಸಿದಾಗ ಕ್ರಿಯಾಪದವು ಅವುಗಳಲ್ಲಿ ಯಾವುದರ ಜೊತೆಯೂ ಅನುರೂಪವಾಗುವುದಿಲ್ಲವೆಂದು ಎಲ್ಲಾ ಹಿಂದಿ ಭಾಷಿಕರಿಗೂ ತಿಳಿದಿದೆ. ಭಾಷಾಶಾಸ್ತ್ರಜ್ಞರು ಇಂತಹ ಕೆಲವು ಪ್ರಶ್ನೆಗಳನ್ನೇ ಚರ್ಚಿಸುತ್ತಾರೆ.

ಭಾಷೆಯೋ ಅಥವಾ ಉಪಭಾಷೆಯೋ?

ಈ ಮೇಲಿನ ಪ್ರಶ್ನೆಗೆ ಸಾಮಾನ್ಯವಾಗಿ ಕೇಳಿಬರುವ ಉತ್ತರವೆಂದರೆ, "ಭಾಷೆಗಳು ಒಂದು ನಿರ್ದಿಷ್ಟ ವ್ಯಾಕರಣವನ್ನು ಅನುಸರಿಸುತ್ತವೆ ಮತ್ತು ಅವುಗಳದ್ದೇ ಆದ ಲಿಪಿಗಳನ್ನು ಹೊಂದಿರುತ್ತವೆ. ಆದರೆ ಉಪಭಾಷೆಗಳಲ್ಲಿ ಇದ್ಯಾವುದೂ ಇರುವುದಿಲ್ಲ. ಭಾಷೆಯನ್ನು ವಿಸ್ತಾರ ಪ್ರದೇಶದಲ್ಲಿ ಹೆಚ್ಚಿನ ಸಂಖ್ಯೆಯ ಜನರು ಮಾತನಾಡುತ್ತಾರೆ, ಆದರೆ ಉಪಭಾಷೆಯು ಸ್ಥಳೀಯ ಅಥವಾ ನಿರ್ದಿಷ್ಟ ಪ್ರದೇಶಕ್ಕೆ ಸೀಮಿತವಾಗಿದೆ. ಭಾಷೆಯು ಪ್ರಮಾಣೀಕೃತವೂ, ಅತ್ಯಾಧುನಿಕವೂ ಆಗಿದೆ. ಅದನ್ನು ಸಾಹಿತ್ಯ, ಪತ್ರಿಕೋದ್ಯಮ, ಸರ್ಕಾರ ಮತ್ತು ಇತರ ಕಛೇರಿಗಳು, ನ್ಯಾಯಾಲಯಗಳು ಮತ್ತಿತರ ಕಡೆ ಬಳಸಲಾಗುತ್ತದೆ, ಆದರೆ ಉಪಭಾಷೆಯನ್ನು ಸಾಮಾನ್ಯ ಸಂಭಾಷಣೆಯಲ್ಲಿ ಮಾತ್ರ ಬಳಸಲಾಗುತ್ತದೆ." ಭಾಷೆಯಲ್ಲಿ ಶುದ್ಧತೆ ಅಥವಾ ನಿಖರತೆ ಬಹಳ ಮುಖ್ಯವೆಂದು ಕೆಲವರ ಅಭಿಪ್ರಾಯವಾದರೆ, ಉಪಭಾಷೆಯು ಇಂತಹ ಯಾವುದೇ ನಿಯಮಗಳಿಗೆ ಸೊಪ್ಪು ಹಾಕುವುದಿಲ್ಲ. ಭಾಷೆ ಮತ್ತು ಉಪಭಾಷೆಯ ನಡುವಿನ ವ್ಯತ್ಯಾಸವನ್ನು ಗುರುತಿಸಲು ಜನರು ಇನ್ನೂ ಹಲವಾರು ಇದೇ ರೀತಿಯ ವಿವರಣೆಗಳನ್ನು ನೀಡಬಹುದು.

ಆದಾಗ್ಯೂ ಭಾಷಾ ದೃಷ್ಟಿಕೋನದಿಂದ, ಭಾಷೆ ಮತ್ತು ಉಪಭಾಷೆಗಳೆರಡೂ ವ್ಯಾಕರಣವನ್ನು ಹೊಂದಿವೆ ಮತ್ತು ನಿಯಮಗಳನ್ನು ಅನುಸರಿಸುತ್ತವೆ. ಅವುಗಳ ನಡುವೆ ಯಾವುದೇ ವ್ಯತ್ಯಾಸವಿಲ್ಲ. ಯಾವುದು ಭಾಷೆಯಾಗಿ ಬೆಳೆಯುತ್ತದೆ ಮತ್ತು ಯಾವುದು ಉಪಭಾಷೆಯಾಗಿ ಉಳಿಯುತ್ತದೆ ಎನ್ನುವುದು ಸಂಪೂರ್ಣವಾಗಿ ಸಾಮಾಜಿಕ ಮತ್ತು ರಾಜಕೀಯ ಸಮಸ್ಯೆಯಾಗಿದೆ. ಪ್ರಮುಖ ವ್ಯಕ್ತಿಗಳಿಂದ (ಪ್ರಭಾವಿ ಮತ್ತು ಧನಿಕ) ಬಳಸಲ್ಪಡುವ ಅಥವಾ ಪೋಷಿಸಲ್ಪಡುವ ಪ್ರಭೇದವು ಗಮನ ಸೆಳೆದು, ಕಾಲಕ್ರಮೇಣ 'ಭಾಷೆ' ಎಂದು ಘೋಷಿಸಲ್ಪಡುತ್ತದೆ. ನಂತರದಲ್ಲಿ ಅದರ ನಿಘಂಟುಗಳು ಮತ್ತು ವ್ಯಾಕರಣವು ರಚನೆಯಾಗಿ ಅದು ಆ ಪ್ರದೇಶದ ಸಾಹಿತ್ಯಿಕ ಭಾಷೆಯೂ

ಆಗುತ್ತದೆ. ಸಮಯ ಕಳೆದಂತೆ, ಈ ಭಾಷೆಯು ಪ್ರಮಾಣೀಕರಿಸಲ್ಪಡುತ್ತದೆ ಮತ್ತು ಶಾಲಾ ಮಕ್ಕಳಿಗೆ ಬೋಧನಾ ಮಾಧ್ಯಮವಾಗುತ್ತದೆ. ನಂತರ ಆ ಪ್ರದೇಶದ ಇದೇ ರೀತಿಯ ಇತರ ಸಂವಹನ ವಿಧಾನಗಳನ್ನು ಆ ನಿರ್ದಿಷ್ಟ 'ಭಾಷೆ' ಯ ಉಪಭಾಷೆಗಳೆಂದು ಘೋಷಿಸಲಾಗುತ್ತದೆ. ಇಂತಹ ಪ್ರಕ್ರಿಯೆಯಿಂದಲೇ ಅವಧಿ, ಬ್ರಜ್, ಮೈಥಿಲಿ, ಭೋಜಪುರಿಯಂತಹ ಮತ್ತಿತರ ಹಿಂದಿಯ ತಾಯಿ ಭಾಷೆಗಳು ಉಪಭಾಷೆಗಳೆಂದು ಕರೆಯಲ್ಪಟ್ಟಿವೆ. ಬಹುಶಃ ಭಾಷೆಗೆ ಬ್ರೈಟ್ ಕೊಟ್ಟಿರುವ ಅತಿ ಸೂಕ್ತ ವ್ಯಾಖ್ಯಾನ ಸರಿಯಾಗಿಯೇ ಇದೆ- "ಸೈನ್ಯ ಮತ್ತು ನೌಕಾಪಡೆಯ ಬಲ ಹೊಂದಿರುವ ಉಪಭಾಷೆಯೇ ಭಾಷೆ." (ಲ್ಯಾಂಗ್ವೇಜ್ ಇಸ್ ಎ ಡಯಲೆಕ್ಟ್ ವಿತ್ ಅನ್ ಆರ್ಮಿ ಅಂಡ್ ಅ ನೇವಿ).

ತಾವು ಶಾಲೆಗೆ ಬರುವಾಗ ತಮ್ಮೊಟ್ಟಿಗೆ ತರುವ ತಾಯಿ ಭಾಷೆಯು ಪ್ರಮಾಣೀಕೃತ ಭಾಷೆಯ ಬಲಿಪೀಠದಲ್ಲಿ ಬಲಿಯಾಗುವುದರಿಂದ, ಈ ಸಂಕೀರ್ಣ ಸಾಮಾಜಿಕ-ರಾಜಕೀಯ ಪ್ರಕ್ರಿಯೆಗಳಲ್ಲಿ ಹೆಚ್ಚು ನರಳುವುದು ದೀನ-ದಲಿತ ಮಕ್ಕಳು. ಉದಾಹರಣೆಗೆ ಈ ಹಿಂದಿ ವಾಕ್ಯವನ್ನು ಗಮನಿಸೋಣ:

**नन्द का नन्दन कदम्ब के पेड़ के नीचे धीरे- धीरे मुरली बजाता है।**

ಅದೇ ವಾಕ್ಯವು ಬ್ರಜ್ ಭಾಷೆಯಲ್ಲಿ ಈ ರೀತಿಯಾಗಿದೆ,

**नन्द को नन्दन कदम्ब को तरु तर धीरे- धीरे मुरली बजावे।**

ಮತ್ತು ಪ್ರಸಿದ್ಧ ಮೈಥಿಲಿ ಕವಿ ವಿದ್ಯಾಪತಿಯ ಭಾಷೆಯಲ್ಲಿ ಅದು ಹೀಗಾಗುತ್ತದೆ:

**नन्दक नन्दन कदमक तरुतर धीरे- धीरे मुरली बजाव।**

ಮೈಥಿಲಿಯ ವ್ಯಾಕರಣ ನಿಯಮಗಳಲ್ಲಿ **नन्द** ಮತ್ತು **नन्दन** ರ ಸಂಬಂಧವನ್ನು 'd' ಎಂಬ ಒಂದೇ ಒಂದು ಅಕ್ಷರವನ್ನು ಬಳಸುವ ಮೂಲಕವೂ, ಬ್ರಜ್‌ನಲ್ಲಿ 'dk§' ಮೂಲಕವೂ ಮತ್ತು ಹಿಂದಿಯಲ್ಲಿ 'dk' ಮೂಲಕವೂ ತೋರಿಸಲಾಗಿದೆ. ಭಾಷಾ ದೃಷ್ಟಿಕೋನದಿಂದ ನೋಡಿದರೆ, ಎಲ್ಲಾ ತಂತ್ರಗಳು ಸಮಾನವಾಗಿ ವ್ಯಾಕರಣಬದ್ಧವಾಗಿ ಕಾಣುತ್ತವೆ.

ಅಧಿಕಾರದೊಂದಿಗಿನ ಸಂಬಂಧ:

ಒಂದು ಶಾಲೆಯಲ್ಲಿ ಶಿಕ್ಷಕನು ತನ್ನನ್ನು ತಾನು 'ಶುದ್ಧ ಮತ್ತು ಪ್ರಮಾಣೀಕೃತ' ಭಾಷೆಯ ಅಭಿರಕ್ಷಕ ಎಂದೇ ಭಾವಿಸಿಬಿಡುತ್ತಾನೆ. ಇದು ಕೂಡ ಅರ್ಥಮಾಡಿಕೊಳ್ಳಬೇಕಾದ ವಿಷಯ. ಇದನ್ನು ಅರ್ಥಮಾಡಿಕೊಳ್ಳುವ ಮೊದಲು ಕೆಲವು ಅಂಶಗಳನ್ನು ಮನದಲ್ಲಿಟ್ಟುಕೊಳ್ಳಬೇಕು. ಮೊದಲನೆಯದಾಗಿ, ಒಂದು ಮಗುವು ಶಾಲೆಗೆ ದಾಖಲಾಗುವ ಹೊತ್ತಿಗೆ ತಾನು ಮಾತನಾಡುವ

ಭಾಷೆಯ ವ್ಯಾಕರಣದ ಬಹುತೇಕ ಎಲ್ಲಾ ನಿಯಮಗಳ ಜ್ಞಾನ ಹೊಂದಿರುತ್ತದೆ. ಎರಡನೆಯದಾಗಿ, ಮಗುವಿನ ಮಾತೃಭಾಷೆಯು ಅದು ಕಲಿಯುವ ಶಾಲೆಯಲ್ಲಿ ಬೋಧನಾ ಮಾಧ್ಯಮವಲ್ಲ ಎನ್ನುವುದು ಒಂದು ರಾಜಕೀಯ ಸಮಸ್ಯೆ. ಮೂರನೆಯದಾಗಿ, ಪ್ರಮಾಣೀಕೃತ ಭಾಷೆಯನ್ನು ಕಲಿಯುವಾಗ ಮಗು ಮಾಡುವ ದೋಷಗಳು ಅನಿಯಮಿತ ಮತ್ತು ಆಧಾರರಹಿತವಲ್ಲ; ಅವು ಒಂದು ನಿರ್ದಿಷ್ಟ ಮಾದರಿಯನ್ನು ಪ್ರತಿಬಿಂಬಿಸುತ್ತವೆ. ನಾಲ್ಕನೆಯದಾಗಿ, ಈ ದೋಷಗಳು ಕಾಲಕ್ರಮೇಣ ಸರಿಯಾಗುತ್ತಾ ಹೋಗುತ್ತದೆಯೇ ಹೊರತು ಶಿಕ್ಷಕರ ಪ್ರಯತ್ನಗಳು ಯಾವುದೇ ತ್ವರಿತ ಫಲಿತಾಂಶವನ್ನೂ ನೀಡುವುದಿಲ್ಲ. ಐದನೆಯದಾಗಿ, ಯಾವ ಮಗುವೂ ತಪ್ಪುಗಳನ್ನು ಮಾಡದೇ ಭಾಷೆಯನ್ನು ಕಲಿಯುವುದಿಲ್ಲ. ಹಾಗೆಯೇ ಪ್ರಥಮ ಭಾಷೆ ಕಲಿಯುವವರು ಅದೇ ಭಾಷೆಯನ್ನು ದ್ವಿತೀಯ ಮತ್ತು ತೃತೀಯ ಭಾಷೆಯಾಗಿ ಕಲಿಯುವವರು ಮಾಡುವ 'ತಪ್ಪು' ಗಳನ್ನೇ ಮಾಡುತ್ತಾರೆ.

ಈಗ ನಾವು ಸಾಹಿತ್ಯದ ವಿಷಯಕ್ಕೆ ಬರೋಣ. ಸಾಮಾನ್ಯವಾಗಿ ಜನರು ವಿಚಾರಶೀಲ ಬರವಣಿಗೆಗಳು ಮೂಡಿಬರುವುದು ಕೇವಲ 'ಭಾಷೆ' ಯಲ್ಲಿ ಮಾತ್ರ ಎಂದು ನಂಬಿರುತ್ತಾರೆ. ಉದಾಹರಣೆಗೆ, ಖಡಿ ಬೋಲಿ ಹಿಂದಿಯನ್ನು ವೃತ್ತ ಪತ್ರಿಕೆಗಳಲ್ಲಿ ಮತ್ತು ಕಛೇರಿಗಳಲ್ಲಿ ಬಳಸುತ್ತಾರೆನ್ನುವ ಕಾರಣಕ್ಕೆ ಅದನ್ನು ಮಾತ್ರ ಪ್ರಮಾಣೀಕೃತ ಭಾಷೆ ಎಂದು ಕರೆದು ಇನ್ನುಳಿದ ಭಾಷೆಗಳಾದ ಬ್ರಜ್, ಅವಧಿ, ಮೈಥಿಲಿ ಮುಂತಾದವುಗಳನ್ನು ಅದರ ಉಪಭಾಷೆಗಳೆಂದು ಕರೆಯಲಾಗುತ್ತದೆ.

ತುಳಸಿದಾಸರು "ರಾಮಚರಿತ ಮಾನಸ" ವನ್ನು ರಚಿಸಿದ ಅವಧಿ ಭಾಷೆ, ಸೂರದಾಸ್ ಮತ್ತು ಇತರ ಹಲವಾರು ಕವಿಗಳು ಸುಂದರವಾದ ಕವನಗಳನ್ನು ರಚಿಸಿದ ಬ್ರಜ್ ಭಾಷೆ ಮತ್ತು ವಿದ್ಯಾಪತಿಯು ತನ್ನ ಕೃತಿಗಳಲ್ಲಿ ಬಳಸಿದ ಮೈಥಿಲಿ ಭಾಷೆ ಪ್ರಸ್ತುತ ಹಿಂದಿಯ 'ತಾಯಿ' ಭಾಷೆಗಳಾಗದೇ ಅದರ 'ಸಂತತಿ' ಭಾಷೆ ಎಂದು ಪರಿಗಣಿಸಲ್ಪಟ್ಟಿರುವುದು ವಿಪರ್ಯಾಸವೇ ಸರಿ. ಇದು ಕೇವಲ ನಮ್ಮ ಕಾಲದ ವಿದ್ಯಮಾನವಲ್ಲ. ಕನೌಜ್ ಅಧಿಕಾರದ ಕೇಂದ್ರವಾಗಿದ್ದಾಗ, ಅಪಭ್ರಂಶವು ಗಣ್ಯರ ಭಾಷೆಯಾಯಿತು ಮತ್ತು ಅವಧಿ, ಬ್ರಜ್, ಮುಂತಾದ ಭಾಷೆಗಳು ಆ ಸಮಯದಲ್ಲಿ ಅವುಗಳಿದ್ದ ರೂಪದಲ್ಲೇ ಅಪಭ್ರಮ್ಸಾ ಭಾಷೆಯ ಉಪಭಾಷೆಗಳೆಂದು ಘೋಷಿಸಲ್ಪಟ್ಟವು. ಹಾಗೆಯೇ, ಅಧಿಕಾರ ಕೇಂದ್ರವು ಬ್ರಜ್ ಪ್ರದೇಶಕ್ಕೆ ಸ್ಥಳಾಂತರಗೊಂಡಾಗ, ಬ್ರಜ್ ಭಾಷೆಗೆ ಪ್ರೋತ್ಸಾಹ ದೊರೆತು ದೆಹಲಿ ಮತ್ತು ಮೀರತ್‌ನಲ್ಲಿ ಬಳಸುತ್ತಿದ್ದ ಖಡಿ ಬೋಲಿ ಭಾಷೆಯು ಅದರ ಉಪಭಾಷೆಯಾಯಿತು. ಇದೇ ರೀತಿ ದೆಹಲಿಯು ಅಧಿಕಾರದ ಕೇಂದ್ರವಾದಾಗ,

ಖಡಿ ಬೋಲಿ ಪ್ರಾಮುಖ್ಯತೆ ಪಡೆಯಿತು ಮತ್ತು ಇತರ ಎಲ್ಲಾ ಭಾಷೆಗಳನ್ನು ಉಪಭಾಷೆಗಳ ಸ್ಥಾನಮಾನಕ್ಕೆ ಇಳಿಸಲಾಯಿತು.

ಭಾಷೆ ಮತ್ತು ಅಧಿಕಾರದ ಸಂಬಂಧವನ್ನು ಅರ್ಥಮಾಡಿಕೊಳ್ಳುವುದು ಅತ್ಯಗತ್ಯ. ಆಗ ಮಾತ್ರ ನಾವು ಈ ವಿಷಯದ ಕುರಿತು ಸಮತೋಲಿತ ಮತ್ತು ರಚನಾತ್ಮಕ ದೃಷ್ಟಿಕೋನವನ್ನು ಹೊಂದಬಹುದು.

ಲಿಪಿ ಮತ್ತು ಭಾಷೆ:

ಭಾಷೆಯ ಸ್ಥಾನಮಾನವನ್ನು ಗಿಟ್ಟಿಸಲು ಬಹು ಅಪೇಕ್ಷಣೀಯವಾದ ಲಿಪಿಯ ವಿಷಯವನ್ನು ನಾವೀಗ ಪರಿಶೀಲಿಸೋಣ. ಲಿಪಿಯ ಬಗೆಗಿನ ಈ ನಿಲುವು ಕೂಡ ದೊಡ್ಡ ತಪ್ಪು ಕಲ್ಪನೆ. ವಾಸ್ತವವಾಗಿ, ಜಗತ್ತಿನ ಎಲ್ಲಾ ಭಾಷೆಗಳನ್ನು ಯಾವುದಾದರೂ ಒಂದು ಲಿಪಿಯಲ್ಲಿ ಬರೆಯಬಹುದು ಅಥವಾ ಕೆಲವು ಸಣ್ಣ ಪುಟ್ಟ ಮಾರ್ಪಾಡುಗಳೊಂದಿಗೆ ಯಾವುದಾದರು ಒಂದು ನಿರ್ದಿಷ್ಟ ಭಾಷೆಯನ್ನು ಜಗತ್ತಿನ ಎಲ್ಲಾ ಲಿಪಿಗಳಲ್ಲಿ ಬರೆಯಬಹುದು. ಉದಾಹರಣೆಗೆ ಹಿಂದಿ ಮತ್ತು ಇಂಗ್ಲಿಷ್ ಭಾಷೆಗಳನ್ನು ಹಾಗೂ ದೇವನಾಗರಿ ಮತ್ತು ರೋಮನ್ ಲಿಪಿಗಳನ್ನು ತೆಗೆದುಕೊಳ್ಳೋಣ:

ಹಿಂದಿ (ದೇವನಾಗರಿ) – मोहन खेल रहा है।

ಹಿಂದಿ (ರೋಮನ್) – mohan khel raha hai

ಭಾರತದಲ್ಲಿ ದೇವನಾಗರಿ ಲಿಪಿಯಲ್ಲಿ ಬರೆಯಲಾದ ಹಲವಾರು ಭಾಷೆಗಳಿವೆ. ಹಾಗೆಯೇ ಹಲವಾರು ಲಿಪಿಗಳಲ್ಲಿ ಬರೆಯಲ್ಪಟ್ಟಿರುವ ನಮ್ಮ ದೇಶದ ಒಂದು ಭಾಷೆಯೆಂದರೆ, ಅದು ಸಂಸ್ಕೃತ. ಯಾವುದೇ ನಿರ್ದಿಷ್ಟ ಭಾಷೆಯಲ್ಲಿ ಸಾಹಿತ್ಯದ ಬೆಳವಣಿಗೆಗೆ ಲಿಪಿಯು ಅವಶ್ಯಕ ಎನ್ನುವುದು ಕೂಡ ನಿಜವಲ್ಲ. ಋಗ್ವೇದದ ವಿಷಯವನ್ನೇ ತೆಗೆದುಕೊಳ್ಳಿ. ಅದು ಸಂಯೋಜನೆಗೊಂಡ ಕಾಲದಲ್ಲಿ ಯಾವುದೇ ಲಿಪಿಗಳಿರಲಿಲ್ಲ ಎನ್ನುವ ಕಾರಣಕ್ಕೆ ಹಲವು ಶತಮಾನಗಳ ಕಾಲ ಋಗ್ವೇದವನ್ನು ಬರೆದಿರಲಿಲ್ಲ. ಇದರ ಹೊರತಾಗಿಯೂ ಆ ಕಾಲದ ಜನ ಅದರ ಶುದ್ಧತೆಯನ್ನು ಕಾಪಾಡಿಕೊಂಡಿದ್ದರು. ಭಾಷೆಯು ಲಿಪಿಗಿಂತ ಮೊದಲೇ ಜನ್ಮ ತಳೆದಿದೆ ಮತ್ತು ಯಾವುದೇ ಭಾಷೆಯ ಸಾಹಿತ್ಯಿಕ ಬೆಳವಣಿಗೆಯಲ್ಲಿ ಲಿಪಿಯ ಪಾತ್ರ ಇರುವುದಿಲ್ಲ.

ಯಾವುದೇ ಗುಂಪಿನ ಜನರು ತಮ್ಮ ಭಾಷೆಗಾಗಿ ತಮ್ಮದೇ ಆದ ಲಿಪಿಯನ್ನು ಆವಿಷ್ಕರಿಸಬಹುದು. ಆದರೆ ಸಮಾಜ ಅದನ್ನು ಎಷ್ಟರ ಮಟ್ಟಿಗೆ ಸ್ವೀಕರಿಸುತ್ತದೆ ಎನ್ನುವುದು ಅದು ಗಳಿಸುವ ರಾಜಕೀಯ ಬೆಂಬಲದ ಮೇಲೆ ಅವಲಂಬಿತವಾಗಿರುತ್ತದೆ. ಇಂದು ಸಂತಾಲಿ ಭಾಷೆಯನ್ನು ದೇವನಾಗರಿ,

ರೋಮನ್, ಬಾಂಗ್ಲಾ, ಒರಿಯಾ ಮತ್ತು ಓಲ್ ಚಿಕಿಯಂತಹ ಹಲವಾರು ಲಿಪಿಗಳಲ್ಲಿ ಬರೆಯಲಾಗುತ್ತದೆ. ಇವುಗಳಲ್ಲಿ ಈಗ ಸಂತಾಲಿಯ ದೊಡ್ಡ ಸಮುದಾಯದ ಸ್ವೀಕೃತಿ ಯಾರಿಗೆ ದೊರೆಯುತ್ತದೆ ಎನ್ನುವುದು ಸಂಪೂರ್ಣವಾಗಿ ರಾಜಕೀಯ ವಿಷಯವಾಗಿದೆ. ಅಲ್ಲಿಯವರೆಗೆ ಎಲ್ಲರೂ ಹೋರಾಡಬೇಕಿದೆ!

ಭಾಷೆಯು ಯಾವ ಪ್ರದೇಶದಲ್ಲಿ ಬಳಸಲ್ಪಡುತ್ತಿದೆ ಎನ್ನುವುದು ಸಹ ಗಮನಹರಿಸಬೇಕಾದ ವಿಷಯ. ವ್ಯಾಪಕ ವಿಸ್ತಾರವಾದ ಪ್ರದೇಶದಲ್ಲಿ ಮಾತನಾಡಲ್ಪಡುವ ಅಥವಾ ಹೆಚ್ಚಿನ ಸಂಖ್ಯೆಯ ಜನರು ಮಾತನಾಡುವುದನ್ನು ಭಾಷೆ ಎಂತಲೂ ಮತ್ತು ಸೀಮಿತ ಅಥವಾ ಸಣ್ಣ ಪ್ರದೇಶದಲ್ಲಿ ಮಾತ್ರ ಬಳಕೆಯಾಗುವುದನ್ನು ಉಪಭಾಷೆ ಎಂತಲೂ ಘೋಷಿಸಿರುವುದು ಅಚ್ಚರಿ ತರುತ್ತದೆ. ಹಿಂದಿಯ ಉದಾಹರಣೆಯನ್ನು ಮತ್ತೊಮ್ಮೆ ತೆಗೆದುಕೊಳ್ಳುವುದಾದರೆ, ಈ ಭಾಷೆಯನ್ನು ಭಾರತದ ಸುಮಾರು ಅರ್ಧದಷ್ಟು ಜನಸಂಖ್ಯೆಯು ಮಾತನಾಡುತ್ತದೆ ಎಂದು ಪತ್ರಿಕೆಗಳು, ರೇಡಿಯೋ, ದೂರದರ್ಶನಗಳ ಮೂಲಕ ನಿರಂತರವಾಗಿ ಬಿಂಬಿಸಲಾಗಿದೆ. ಕೇಂದ್ರದ ಅಧಿಕೃತ ಭಾಷೆ ಎಂದು ಘೋಷಿಸುವ ಮೂಲಕ ಇದಕ್ಕೆ ಸಾಂವಿಧಾನಿಕ ಸ್ಥಾನಮಾನವನ್ನು ನೀಡಲಾಗಿದೆ (ಜನರು ಇದನ್ನು ರಾಷ್ಟ್ರೀಯ ಭಾಷೆ ಎಂದು ತಪ್ಪಾಗಿ ಅರ್ಥೈಸಿದ್ದಾರೆ). ಹಾಗೆಯೇ ಶಾಲೆಗಳಲ್ಲಿ ಇದನ್ನು ಬೋಧನಾ ಮಾಧ್ಯಮವಾಗಿಯೂ ಮಾಡಲಾಗಿದೆ. ಈ ಎಲ್ಲಾ ರೀತಿಯ ಬೆಂಬಲ ಮತ್ತು ಪೋಷಣೆಗಳೊಂದಿಗೆ ಹಿಂದಿ ಒಂದು 'ಭಾಷೆ' ಯಾಗಿ ಮಾರ್ಪಟ್ಟರೆ, ಬ್ರಜ್, ಅವಧಿ, ಭೋಜ್‌ಪುರಿ ಮತ್ತು ಮೈಥಿಲಿ ಅದರ ಉಪಭಾಷೆಗಳಾಗಿ ಉಳಿದವು. ಈ 'ಉಪಭಾಷೆ' ಗಳನ್ನು ಮಾತನಾಡುವ ದೊಡ್ಡ ಜನಸಂಖ್ಯೆಯನ್ನು ಒಗ್ಗೂಡಿಸಿ ಎಲ್ಲರನ್ನೂ 'ಹಿಂದಿ-ಮಾತನಾಡುವ' ಜನ ಎಂಬ ಹಣೆಪಟ್ಟಿಯಡಿ ತಂದು, ಇದೇ ಕಾರಣಕ್ಕೆ ಭಾರತದಲ್ಲಿ ಲಕ್ಷಾಂತರ ಜನರು ಹಿಂದಿ ಮಾತನಾಡುತ್ತಾರೆ ಎಂದು ಘೋಷಿಸಲಾಗಿದೆ.

ಎಷ್ಟು ಜನ ಪ್ರಮಾಣೀಕೃತ ಹಿಂದಿ ಮಾತನಾಡುತ್ತಾರೆ? ಎಂದು ಕೇಳಿದರೆ ಅದಕ್ಕೆ ಉತ್ತರ "ಕೆಲವೇ ಮಂದಿ" . ಸಾಮಾನ್ಯವಾಗಿ ಜನರು ತಮ್ಮ ದೈನಂದಿನ ಅನೌಪಚಾರಿಕ ಸಂಭಾಷಣೆಯಲ್ಲಿ ತಮ್ಮದೇ ಭಾಷೆಗಳಾದ ಭೋಜ್‌ಪುರಿ, ಮೈಥಿಲಿ, ಅವಧಿ, ಬ್ರಜ್, ಮಗಧಿ, ಬುಂದೇಲಿ, ಹಾಡೋತಿ, ಬಾಗಡಿ, ಛತ್ತೀಸ್‌ಗಡಿ, ಇತ್ಯಾದಿ ಭಾಷೆಗಳನ್ನು ಬಳಸುತ್ತಾರೆ. ಪ್ರಮಾಣೀಕೃತ ಭಾಷೆಯನ್ನು ಹೆಚ್ಚೇನೂ ಬಳಸುವುದಿಲ್ಲ. ಅದನ್ನು ಬಹುಶಃ ಅಲಹಾಬಾದ್, ಬನಾರಸ್ ಮತ್ತು ಮೀರತ್‌ನ ಕೆಲವು ಭಾಗಗಳಲ್ಲಿ ಮಾತ್ರ ಮಾತನಾಡಬಹುದು. ಆದರೆ ಚಂಬಾ ಮತ್ತು ಹಮೀರ್‌ಪುರ (ಹಿಮಾಚಲ ಪ್ರದೇಶ), ರೊಹ್‌ತಕ್ ಮತ್ತು ಭಿವಾನಿ (ಹರಿಯಾನ), ಜೈಸಲ್‌ಮರ್ ಮತ್ತು ಸವಾಯಿ ಮಾಧೋಪುರ್ (ರಾಜಸ್ಥಾನ), ಅರಾ ಮತ್ತು ಚಪ್ರಾ (ಬಿಹಾರ್), ರಾಯ್‌ಪುರ ಮತ್ತು ಬಿಲಾಸ್‌ಪುರ

(ಛತ್ತೀಸ್‌ಗಡ), ಇತ್ಯಾದಿ ಪ್ರದೇಶಗಳ ಕಥೆ ಏನು? ಅವರು ಪ್ರಮಾಣೀಕೃತ ಹಿಂದಿ ಮಾತನಾಡುತ್ತಾರೆಯೇ?

ಆದ್ದರಿಂದ, ವ್ಯಾಕರಣ, ಲಿಪಿ, ಸಾಹಿತ್ಯ ಮತ್ತು ಕ್ಷೇತ್ರದ ಗಾತ್ರದ ಆಧಾರದ ಮೇಲೆ ಭಾಷೆ ಮತ್ತು ಉಪಭಾಷೆಯ ನಡುವೆ ಯಾವುದೇ ವ್ಯತ್ಯಾಸವನ್ನು ಮಾಡಲು ಸಾಧ್ಯವಿಲ್ಲ ಎಂಬುದು ಸ್ಪಷ್ಟವಾಗಿದೆ. ಹಾಗಾದರೆ ಈ ವ್ಯತ್ಯಾಸ ಅಥವಾ ಶ್ರೇಣೀಕರಣವು ಏಕೆ ಸೃಷ್ಟಿಯಾಗಿದೆ? ಹಿಂದಿ, ಇಂಗ್ಲಿಷ್ ಅಥವಾ ಇನ್ಯಾವುದೇ ಭಾಷೆಗಳಿಗೆ ಏಕೆ ಮತ್ತು ಯಾವ ಆಧಾರದ ಮೇಲೆ ಉನ್ನತ ಸ್ಥಾನಮಾನವನ್ನು ನೀಡಲಾಗಿದೆ? ಇದು ಪ್ರತಿಯೊಬ್ಬರೂ ಆತ್ಮಾವಲೋಕನ ಮಾಡಿಕೊಳ್ಳಲು ಉತ್ತೇಜಿಸುವ ಪ್ರಶ್ನೆಯಾಗಿದೆ.

ಈ ಲೇಖನವು "ಕೌನ್ ಭಾಷಾ ಕೌನ್ ಬೋಲಿ" ಶೀರ್ಷಿಕೆಯ ಹಿಂದಿ ಮೂಲದ ಆವೃತ್ತಿಯಿಂದ ಅಳವಡಿಸಿಕೊಂಡ "ಲ್ಯಾಂಗ್ವೇಜ್ ಅಂಡ್ ಡಯಲೆಕ್ಟ್" ಶೀರ್ಷಿಕೆಯ ಇಂಗ್ಲಿಷ್ ಲೇಖನದ ಅನುವಾದ.

ರಮಾ ಕಾಂತ್ ಅಗ್ನಿಹೋತ್ರಿ ದೆಹಲಿ ವಿಶ್ವವಿದ್ಯಾಲಯದಲ್ಲಿ ಭಾಷಾಶಾಸ್ತ್ರದ ಪ್ರಾಧ್ಯಾಪಕರು. ೧೯೭೯ರಲ್ಲಿ ಯಾರ್ಕ್ ವಿಶ್ವವಿದ್ಯಾಲಯದ (uk) ಡಾಕ್ಟರೇಟ್ (ಡಿ.ಫಿಲ್) ಪದವಿಯನ್ನು ಪಡೆದಿದ್ದಾರೆ. ಎ.ಎಲ್. ಖನ್ನಾರವರೊಂದಿಗೆ ಸೇಜ್ ಪ್ರಕಾಶನದ ರೀಸರ್ಚ್ ಇನ್ ಅಪ್ಲೈಡ್ ಲಿಂಗ್ವಿಸ್ಟಿಕ್ಸ್ ಸೀರಿಸ್ (RAL)ನ ಸಂಪಾದಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಎನ್.ಸಿ.ಇ.ಆರ್.ಟಿಯ ನ್ಯಾಷನಲ್ ಫೋಕಸ್ ಗ್ರೂಪ್ ಆನ್ ದಿ ಟೀಚಿಂಗ್ ಆಫ್ ಇಂಡಿಯನ್ ಲ್ಯಾಂಗ್ವೇಜಸ್‌ನ ಮುಖ್ಯಸ್ಥರಾಗಿಯೂ ಕಾರ್ಯ ನಿರ್ವಹಿಸಿದ್ದಾರೆ. ಸಂಪರ್ಕಿಸಬಹುದಾದ ಇ–ಮೇಲ್ ವಿಳಾಸ: agniirk@yahoo.com